**ಪ್ರಮಾಣೀಕರಿಸಲಾದ ದಿನಾಂಕಃ– 25.02.2026.**

**ಪಾಟೀ ಸವಾಲುಃ ಆರೋಪಿ ಪರ ಶ್ರೀ. ಬಿ ಎಸ್ ಪಿ ವಕೀಲರಿಂದಃ–**

ಸಂಜೆ 07.45 ರಿಂದ 08.00 ಗಂಟೆ ಸಮಯದಲ್ಲಿ ಪೊಲೀಸರು ನನ್ನ ಹೇಳಿಕೆಯನ್ನು ಆಸ್ಪತ್ರೆಯಲ್ಲಿ ಪಡೆದುಕೊಂಡರು. ನಾನು ಹೇಳಿಕೆ ಕೊಟ್ಟಾಗ ಪ್ರಜ್ಞೆ ಇತ್ತು, ಅದನ್ನು ತಿಳಿದುಕೊಂಡ ನಂತರ ಸಹಿ ಹಾಕಿರುತ್ತೇನೆ. ಆರೋಪಿ ಗಲಾಟೆಯಲ್ಲಿ ನನ್ನ ಕತ್ತಿನಲ್ಲಿದ್ದ ಸರವನ್ನು ಕಳುವು ಮಾಡಿದ್ದಾನೆಂದು ಹೇಳಿರುವುದು ಸರಿ. ಪೊಲೀಸರಿಗೆ ಹೇಳಿಕೆ ಕೊಡುವ ಸಮಯದಲ್ಲಿ ಸರ ಕಳುವಿನ ಬಗ್ಗೆ ಹೇಳಿರುತ್ತೇನೆ. ನನ್ನ ಹೇಳಿಕೆಯಲ್ಲಿ ನನ್ನ ಕತ್ತಿನ ಸರ ಬಿದ್ದು ಹೋಗಿತ್ತು ಎಂದು ಹೇಳಿರುವುದಿಲ್ಲ, ಸಾಕ್ಷಿ ಮುಂದುವರೆದು ನನಗೆ ಆಗಿನ ಪರಿಸ್ಥಿತಿಯಲ್ಲಿ ತಲೆ ಹೊಡೆದಿತ್ತು, ಕತ್ತಿನ ಹತ್ತಿರ ತರಚಿದ ಗಾಯಗಳಾಗಿತ್ತು, ನಾನು ಪೊಲೀಸರಿಗೆ ಆರೋಪಿ ಕಳುವು ಮಾಡಿದ್ದಾನೆಂದು ಹೇಳಿರುತ್ತೇನೆ ಹೊರತು ಬಿದ್ದು ಹೋಗಿರುವ ಬಗ್ಗೆ ಹೇಳಿಲ್ಲ. ಸಾಕ್ಷಿಗೆ ನಿ ಪಿ 1 ದೂರಿನಲ್ಲಿ ಆ ಅಲ್ಲಗೆಳೆದ ಭಾಗವನ್ನು ಓದಿ ತೋರಿಸಲಾಯಿತು. ಆ ಅಲ್ಲಗೆಳೆದ ಹೇಳಿಕೆ ಭಾಗವನ್ನು ನಿ ಡಿ 1 ಎಂದು ಗುರುತಿಸಲಾಯಿತು.

Classic hotel ಹತ್ತಿರ ಗಲಾಟೆ ಆದಾಗ ಚಾಸಾ 3 ರವರು ಬಂದರು. ಚಾಸಾ 3 ರವರು ನನ್ನನ್ನು ಸರ್ಕಾರಿ ಆಸ್ಪತ್ರೆಗೆ ನಡೆಸಿಕೊಂಡು ಹೋದರು. ಆರೋಪಿ ಗೋಣಿಕೊಪ್ಪ ವಾಸಿ ಎಂದು ಮಾತ್ರ ಗೊತ್ತಿದ್ದು, ಆತನ ಹೆಸರು ಗೊತ್ತಿರಲಿಲ್ಲ. ಆಸ್ಪತ್ರೆಯಲ್ಲಿ ಹೇಳಿಕೆ ಕೊಟ್ಟ ನಂತರ ಅಲ್ಲಿಗೆ ಬಂದಂತಹ ವ್ಯಕ್ತಿಗಳು ಆರೋಪಿಯ ಹೆಸರು ಹೇಳಿದ್ದಕ್ಕೆ ತಿಳಿದುಕೊಂಡೆ. ಹೋಟೆಲ್ ನಲ್ಲಿ ಊಟವನ್ನು ತರಿಸಲು ಹೇಳಿದ್ದು ನಾನು ಆಚೆ ಕಾಯುತ್ತಿದ್ದೆ. ಆರೋಪಿ Classic hotel ರಸ್ತೆಯ ಬದಿಯಲ್ಲೇ ನಿಂತಿದ್ದ. ನನ್ನ ಕಾರು Classic hotel ರಸ್ತೆಯ ಬದಿಯಲ್ಲೇ ನಿಲ್ಲಿಸಿದ್ದೆ. ಆರೋಪಿಯನ್ನು ನೋಡಿದಾಗ 5 – 6 ಅಡಿ ದೂರದಲ್ಲಿದ್ದ. Classic hotel ಬದಿಯಲ್ಲಿ ಅಂದು ಗಾಡಿಗಳನ್ನು ಪಾರ್ಕ್ ಮಾಡುವ ಜಾಗವಾಗಿದ್ದು ಅಷ್ಟು ಜನರು ಗಲಾಟೆ ಆದಾಗ ಇರಲಿಲ್ಲ. ನಾನು ನೋಡುವ ಮೊದಲು ಆರೋಪಿ ನನ್ನ ಹೆಂಡತಿಯನ್ನು ಶಬ್ದ ಮಾಡಿ

ಕರೆಯುವುದನ್ನು ನಾನು ನೋಡಿರುತ್ತೇನೆ. ಈ ವಿಚಾರವನ್ನು ಪೊಲೀಸರಿಗೆ ಹೇಳಿದ್ದೇನೆ. ನಾನು ಆರೋಪಿಯನ್ನು ಹೇಳಿದ್ದಕ್ಕೆ ಮಾತಿಗೆ ಮಾತಾಗಿ ನಾನು ಆಗ ಕೂದಲು ಉದ್ದಕ್ಕೆ ಬಿಟ್ಟಿದ್ದು ಆ ಕೂದಲನ್ನು ಹಿಡಿದುಕೊಂಡು ನನ್ನ ಎಡಗೈನ ಹೆಬ್ಬೆರಳನ್ನು ಕಚ್ಚಿರುತ್ತಾನೆ. 15 ನಿಮಿಷಗಳ ಕಾಲ ಗಲಾಟೆವಾಯಿತು. ಆರೋಪಿ ನನ್ನನ್ನು ಕಲ್ಲಿನಿಂದ ಹೊಡೆದಿರುತ್ತಾನೆ, ಆಗ ಅಲ್ಲಿ ಜನರಿದ್ದರು. ನನ್ನ ಬಟ್ಟೆಗೆ ರಕ್ತಕಲೆ ಆಯಿತು. ಕಲ್ಲಿಗೂ ರಕ್ತ ತಾಕಿ, ನೆಲಕ್ಕೆ ಬಿದ್ದಿತು. ನನ್ನ ಹೆಂಡತಿ ಆಗ ಏನು ಮಾಡುವ ಸ್ಥಿತಿಯಲ್ಲಿರಲಿಲ್ಲ. ನನ್ನ ಹೆಂಡತಿ ಹಾಕಿದ್ದ ಬಟ್ಟೆಗೆ ರಕ್ತ ಕಲೆ ಆಗಿಲ್ಲ.

ನಾನು ಆರೋಪಿಯ ಮೇಲೆ ಹಲ್ಲೆ ಮಾಡಿಲ್ಲ. ಆರೋಪಿಯ ಮೊಬೈಲ್ ಅನ್ನು ಕಿತ್ತುಕೊಳ್ಳಲಿಲ್ಲ ಮತ್ತು ತಳ್ಳಲಿಲ್ಲ. ಆರೋಪಿಯನ್ನು ಸಾರ್ವಜನಿಕರು ಪೊಲೀಸರಿಗೆ ಒಪ್ಪಿಸಿದರು. ಪೊಲೀಸರು ಅಲ್ಲಿ ಗಲಾಟೆ ವೇಳೆ ಬರಲಿಲ್ಲ. ಯಾವ ಕಲ್ಲಿನಿಂದ ಆ ದಿನ ಹೊಡೆದ ಎಂದು ನನಗೆ ಹೇಳಲಾಗುವುದಿಲ್ಲ. ಪೊಲೀಸರು ರಕ್ತಕಲೆ ಬಟ್ಟೆ ಪಡೆಯಲಿಲ್ಲ, ಜಾಸ್ತಿ ಏನು ಆಗಿರಲಿಲ್ಲ. ಪೊಲೀಸರು ಸ್ಥಳಕ್ಕೆ ಬರಬೇಕು ಎಂದು ಹೇಳಿದರು, ಆದರೆ ಸಮಯ ನೆನಪಾಗುತ್ತಿಲ್ಲ. ಹೋದಾಗ ಸ್ಥಳದಲ್ಲಿ ಪೊಲೀಸರಿದ್ದರು. ಅಲ್ಲಿ ಸುತ್ತಮುತ್ತಲಿದ್ದ ಅಂಗಡಿಗಳ ಮಾಲೀಕರನ್ನು ಮಹಜರ್ ಗೆ ಕರೆಯಲಿಲ್ಲ. ಸ್ಥಳದಲ್ಲಿ ಮಹಜರ್ ಅನ್ನು ಬರೆದರು. ರಸ್ತೆಯಲ್ಲಿ ಬಿದ್ದ ರಕ್ತದ ಕಲೆಯನ್ನು ನಾನು ತೋರಿಸಿಲ್ಲ. ನನ್ನ ಸ್ನೇಹಿತ ಚಾಸಾ 3 ರವರು ರಸ್ತೆಯಲ್ಲಿ ಬಿದ್ದ ರಕ್ತ ತೋರಿಸಲಿಲ್ಲ. ಹೋಟೆಲ್ entrance ನಿಂದ 2- 3 ಅಡಿ ಪಕ್ಕಕ್ಕೆ ಈ ಗಲಾಟೆ ಆಗಿರುತ್ತದೆ. ಬಾರ್ ಹತ್ತಿರ ಗಲಾಟೆ ಆಗಲಿಲ್ಲ, ನನ್ನ ಹೆಂಡತಿ ಆರೋಪಿ ಸನ್ನೆ ಮಾಡುತ್ತಿದ್ದಾನೆ ಎಂದು ಹೇಳಿರುತ್ತಾಳೆ. ನಾನು ಆರೋಪಿಯ ಫೋನ್ ಅನ್ನು ಕಿತ್ತುಕೊಂಡಿಲ್ಲ, ಅವನನ್ನು ತಳ್ಳಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಚಿನ್ನದ ಸರ ಇನ್ನು ಸಿಕ್ಕಿಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

sd/-

ಸಿವಿಲ್ ನ್ಯಾಯಾಧೀಶರು

ಮತ್ತು ಪ್ರದನ್ಯಾದಂ., ಪೊನ್ನಂಪೇಟೆ